ಎತ್ತಿಕೊಂಡು ಊರಿನ ಪೋಸ್ಟ್ ಮಾಸ್ಟರ್ ಗ್ರೇವ್ಸ್ ಆಗಮಿಸಿದರು. ಆ ಸ್ಟೂಲಿನ ಮೇಲೆ ಮಿಸ್ಟರ್ ಸಮ್ಮರ್ಸ್ ಕಪ್ಪು ಪೆಟ್ಟಿಗೆಯನ್ನು ಇರಿಸಿದರು.

"ನಿಮ್ಮಲ್ಲಿ ಯಾರಾದರೂ ಮುಂದೆ ಬಂದು ನನಗೆ ಸಹಾಯ ಮಾಡುವಿರ?" ಅವರು ಕೇಳಿದರು.

ಎಲ್ಲರೂ ಒಬ್ಬರನ್ನೊಬ್ಬರ ಮುಖ ನೋಡಿದರೇ ವಿನಃ, ಯಾರೂ ಮುಂದೆ ಬರಲಿಲ್ಲ. ಸ್ವಲ್ಪ ಸಮಯದ ನಂತರ ಮಾರ್ಟಿನ್ ಮತ್ತು ಅವನ ಮಗ ಬ್ಯಾಕ್ಸ್ಟರ್ ಮುಂದೆ ಬಂದು ಪೆಟ್ಟಿಗೆಯ ಎರಡು ಬದಿಗಳನ್ನು ಹಿಡಿದು ಕೊಂಡರು. ಮಿಸ್ಟರ್ ಸಮ್ಮರ್ಸ್ ಪೆಟ್ಟಿಗೆಯೊಳಗಿದ್ದ ಲಾಟರಿ ಚೀಟಿಗಳನ್ನು ಚೆನ್ನಾಗಿ ಮೇಲೆ ಕೆಳಗೆ ಕಲೆಸಿದರು.

ಲಾಟರಿ ಎತ್ತುವ ಪರಂಪರಾಗತ ಪೆಟ್ಟಿಗೆ ಎಂದೋ ಮುರಿದು ಬಿದ್ದಿದ್ದು, ಅದರ ಜಾಗದಲ್ಲಿ ಈಗ ಬಳಸುತ್ತಿದ್ದ ಈ ಕಪ್ಪು ಪೆಟ್ಟಿಗೆಯೂ ಕೂಡ ಊರಿನ ಹಿರಿಯ ವಾರ್ನರ್ ಅಜ್ಜ ಹುಟ್ಟುವುದಕ್ಕಿಂತ ಮೊದಲಿನಿಂದಲೂ ಬಳಸಲ್ಪಡುತ್ತಿತ್ತು. ಈ ಪೆಟ್ಟಿಗೆಯೂ ಎಷ್ಟೊಂದು ಹಳತಾಗಿತ್ತೆಂದರೆ ಹೊಸ ಪೆಟ್ಟಿಗೆಯನ್ನು ಮಾಡಿಸುವ ವಿಚಾರವಾಗಿ ಮಿಸ್ಟರ್ ಸಮ್ಮರ್ಸ್ ಊರಿನವರ ಬಳಿ ಪರಿಪರಿಯಾಗಿ ವಿನಂತಿಸಿಕೊಂಡಿದ್ದರೂ ಯಾರೂ ಕಿವಿಗೆ ಹಾಕಿಕೊಂಡಿರಲಿಲ್ಲ. ಯಾರಿಗೂ ಸಂಪ್ರದಾಯವನ್ನು ಮುರಿಯುವುದು ಬೇಕಿರಲಿಲ್ಲ. ಅವರಿಗೆ ಈ ಕಪ್ಪು ಪೆಟ್ಟಿಗೆಯ ಮೇಲೆ ಭಾವನಾತ್ಮಕ ಸಂಬಂಧವಿತ್ತು. ಹಳೆಯ ಪೆಟ್ಟಿಗೆಯ ಕೆಲವು ಹಲಗೆಗಳನ್ನು ಕಪ್ಪು ಪೆಟ್ಟಿಗೆಗೆ ಬಳಸಲಾಗಿದೆ ಎಂಬುದೇ ಇದಕ್ಕೆ ಕಾರಣ. ಪ್ರತಿ ವರ್ಷ ಲಾಟರಿ ಎತ್ತಿದ ನಂತರ ಪೆಟ್ಟಿಗೆ ಬದಲಾಯಿಸುವ ವಿಚಾರವಾಗಿ ಮಿಸ್ಟರ್ ಸಮ್ಮರ್ಸ್ ಸಂಪ್ರದಾಯವೆಂಬಂತೆ ಹೇಳುತ್ತಿದ್ದರೂ ಯಥಾಸ್ಥಿತಿ ಮುಂದುವರೆದಿತ್ತು. ವರ್ಷಗಳು ಕಳೆದಂತೆ ಲಾಟರಿಪೆಟ್ಟಿಗೆಯ ಸ್ಥಿತಿ ಬಿಗಡಾಯಿಸುತ್ತಲೇ ಇತ್ತು.

ಒಂದು ವಿಷಯದಲ್ಲಿ ಮಾತ್ರ ಮಿಸ್ಟರ್ ಸಮ್ಮರ್ಸ್ ಬದಲಾವಣೆ ತರುವುದರಲ್ಲಿ ಯಶಸ್ವಿಯಾಗಿದ್ದರು. ಎಂದಿನಿಂದಲೂ ಲಾಟರಿ ಎತ್ತಲು ಬಳಸುತ್ತಿದ್ದ ಮರದ ಬಿಲ್ಲೆಗಳ ಬದಲು ಕಾಗದದ ಚೀಟಿಗಳನ್ನು ಬಳಸಲು ಜನರನ್ನು ರಾಜಿಗೊಳಿಸಲು ಅವರು ಯಶಸ್ವಿಯಾಗಿದ್ದರು. ವರ್ಷಗಳು ಸರಿದಂತೆ ಜನಸಂಖ್ಯೆಯೂ ಏರುತ್ತಿತ್ತು. ಇಷ್ಟೊಂದು ಜನರಿಗೆ ಹಂಚಲು ಮರದ ಬಿಲ್ಲೆ ಮಾಡಿ ಸೀಮಿತ ಗಾತ್ರದ ಪೆಟ್ಟಿಗೆಯಲ್ಲಿರಿಸಿ ಕಲೆಸಲು ಸಾಧ್ಯವಾಗುತ್ತಿರಲಿಲ್ಲ. ಲಾಟರಿ ಎತ್ತುವ ಹಿಂದಿನ ರಾತ್ರಿ ಮಿಸ್ಟರ್ ಸಮ್ಮರ್ಸ್ ಮತ್ತು ಗ್ರೇವ್ಸ್ ಕಾಗದದ ಚೀಟಿಗಳನ್ನು ಕತ್ತರಿಸಿ ಪೆಟ್ಟಿಗೆಗೆ ತುಂಬಿಸುತ್ತಿದ್ದರು. ಮಾರನೆಯ ಬೆಳಿಗ್ಗೆ ಅದನ್ನು ಊರ ಚೌಕಕ್ಕೆ ಕೊಂಡೊಯ್ಯುವವರೆಗೂ ಮಿಸ್ಟರ್ ಸಮ್ಮರ್ಸರ ಇದ್ದಿಲು ಫ್ಯಾಕ್ಟರಿಯ ಖಜಾನೆಯಲ್ಲಿ ಭದ್ರವಾಗಿರುತ್ತಿತ್ತು. ವರ್ಷದ ಇತರೆ ದಿನಗಳಲ್ಲಿ ಅದು ಪೋಸ್ಟಾಫೀಸಿನಲ್ಲೋ ಇಲ್ಲಾ ಮಾರ್ಟಿನನ ದಿನಸಿ ಅಂಗಡಿಯಲ್ಲಿ ಬಿದ್ದು ಕೊಂಡಿರುತ್ತಿತ್ತು.

ಲಾಟರಿ ಎತ್ತಲು ಅಧಿಕೃತವಾಗಿ ಘೋಷಿಸುವ ಮೊದಲು ಕೆಲವು ಶಿಷ್ಟಾಚಾರಗಳನ್ನು ಪಾಲಿಸಬೇಕಿತ್ತು. ಪ್ರತಿಯೊಂದು ಕುಟುಂಬ, ಮತ್ತು ಆ ಕುಟುಂಬಗಳ ಸದಸ್ಯರ ಹೆಸರಿನ ಪಟ್ಟಿಯನ್ನು ತಯಾರಿಸುವುದು ಅವಶ್ಯವಾಗಿತ್ತು. ಮಿಸ್ಟರ್ ಸಮ್ಮರ್ಸರನ್ನು ಲಾಟರಿ ಎತ್ತುವ ಅಧಿಕೃತ ಸಂಚಾಲಕರನ್ನಾಗಿಸುವ ಮುನ್ನ ಪೋಸ್ಟ್ ಮಾಸ್ಟರರಾದ ಗ್ರೇವ್ಸ್, ಅವರಿಗೆ ಪ್ರತಿಜ್ಞಾವಿಧಿ ಬೋಧಿಸಬೇಕಾಗಿತ್ತು. ಕೆಲವು ವರ್ಷಗಳ ಹಿಂದೆ ಲಾಟರಿ ಶುರು ಆಗುವ ಮುನ್ನ ಒಂದು ಪ್ರಾರ್ಥನಾ ಗೀತೆ ಹಾಡುವ ಸಂಪ್ರದಾಯವಿತ್ತು. ಈಗ ಅದು ನಿಂತು ಹೋಗಿತ್ತು. ಅದಷ್ಟೇ ಅಲ್ಲದೆ ಲಾಟರಿ ನಡೆಸುವವರು ಲಾಟರಿ ಎತ್ತುವವರಿಗೆ ಸೆಲ್ಯೂಟ್ ಹೊಡೆದು ಬರಮಾಡಿಕೊಳ್ಳುವ ಸಂಪ್ರದಾಯವೂ ಇತ್ತು. ಅದೂ ಬದಲಾಗಿ, ಈಗ, ಬಂದವರೊಡನೆ ಕೆಲವು ಮಾತುಗಳನ್ನಾಡುವುದು ರೂಢಿಗೆ ಬಂದಿತ್ತು. ಈ ಎಲ್ಲಾ ಕೆಲಸಗಳಿಗೆ ಮಿಸ್ಟರ್ ಸಮ್ಮರ್ಸರೇ ತಕ್ಕ ವ್ಯಕ್ತಿಯಾಗಿದ್ದರು.

ಶಿಷ್ಟಾಚಾರದ ಕೆಲಸಗಳೆಲ್ಲವೂ ಮುಗಿಸಿ ಮಿಸ್ಟರ್ ಸಮ್ಮರ್ಸ್ ಜನರೆಡೆಗೆ ತಿರುಗಿದರು. ಅನತಿ